ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು

ಸಂಖ್ಯೆಎನ್.ಆರ್.ಎಸ್(1)81/15-16 ದಿನಾಂಕ: 16 /11/2015

## ಸುತ್ತೋಲೆ

ವಿಷಯ: ಶುಶ್ರೂಷಕ ಅಧೀಕ್ಷಕರು ದರ್ಜೆ-2 ಹುದ್ದೆಯಿಂದ ಶುಶ್ರೂಷ ಅಧೀಕ್ಷಕರು ದರ್ಜೆ-1ರ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ: ಈ ನಿರ್ದೇಶನಾಲಯ ಅಧಿಕೃತ ಜ್ಞಾಪನಾ ಪತ್ರ ಸಂ: ಎನ್ಆರ್ಎಸ್(1)91/09-10, ದಿನಾಂಕ: 14.10.2015.

* * * * *

ಶುಶ್ರೂಷಕ ಅಧೀಕ್ಷಕರು ದರ್ಜೆ-2ರ ಹುದ್ದೆಯಿಂದ ಶುಶ್ರೂಷ ಅಧೀಕ್ಷಕರು ದರ್ಜೆ-1ರ ಹುದ್ದೆಗೆ ಆಡಳಿತ ಹಿತದೃಷ್ಟಿಯಿಂದ ಪದೋನ್ನತಿ ನೀಡಬೇಕಾಗಿರುವುದರಿಂದ ಈ ಕೆಳಗೆ ಕಾಣಿಸಿದ ಮಾಹಿತಿಯನ್ನು ಶುಶ್ರೂಷಾ ಅಧೀಕ್ಷಕರು ದರ್ಜೆ-2 ಇವರ ಗಮನಕ್ಕೆ ತಂದು ದಿನಾಂಕ: 05.12.2015 ರೊಳಗೆ ತಪ್ಪದೇ ಪಡೆದು ಕಳುಹಿಸುವುದು.

| | |
|---|---|
| 01 | ಉಲ್ಲೇಖದ ಶುಶ್ರೂಷಾಅಧೀಕ್ಷಕರು ದರ್ಜೆ-2ರ ಅಂತಿಮ ಜೇಷ್ಠತಾ ಪಟ್ಟಿಯಲ್ಲಿನ ಕ್ರ.ಸಂ. 01 ರಿಂದ 78 ಸಾಮಾನ್ಯ ವರ್ಗದವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಶುಶ್ರೂಷ ಅಧೀಕ್ಷಕರು ದರ್ಜೆ-2ರ ಸೇವಾ ವಿವರಗಳೊಂದಿಗೆ ಹಾಗೂ ಹೈದರಬಾದ್-ಕರ್ನಾಟಕ ಪ್ರದೇಶಕ್ಕೆ ಸಂಬಂಧಪಟ್ಟಂತೆ ಜೇಷ್ಠತಾ ಪಟ್ಟಿ ಇರುವ ಎಲ್ಲಾ ಶುಶ್ರೂಷಾಅಧೀಕ್ಷಕರು ದರ್ಜೆ-2 ಈ ಕೆಳಕಂಡ ವಿವರಗಳನ್ನು ಸಲ್ಲಿಸುವುದು. |
| 02 | ಹೈದರಬಾದ್-ಕರ್ನಾಟಕ ಪ್ರದೇಶಕ್ಕೆ ಸಂಬಂಧಪಟ್ಟ ಜಿಲ್ಲೆಗಳಲ್ಲಿ ಮಂಜೂರಾದ ಹುದ್ದೆಗಳ ವಿವರಗಳು ಈ ಪೈಕಿ ಕಾರ್ಯನಿರತ ಶುಶ್ರೂಷ ಅಧೀಕ್ಷಕರು ದರ್ಜೆ-1ರ ಸೇವಾವಿವರದೊಂದಿಗೆ ಸ್ಥಳೀಯ ವ್ಯಕ್ತಿಯೇ ಅಥವಾ ಸ್ಥಳಿಯೇತರ ವ್ಯಕ್ತಿ ಎಂಬುದರ ಬಗ್ಗೆ ದೃಢೀಕೃತ ಪ್ರತಿ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳು |
| 03 | ಶುಶ್ರೂಷ ಅಧೀಕ್ಷಕರ ಅಂತಿಮ ಜೇಷ್ಠತಾ ಪಟ್ಟಿಯಲ್ಲಿನ ಕ್ರ.ಸಂ. 01 ರಿಂದ 78ರವರೆಗಿನ ನೌಕರರಲ್ಲಿ ನರ್ಸಿಂಗ್ ಪದವಿ ಅಥವಾ ನರ್ಸಿಂಗ್ ಸ್ನಾತಕೋತ್ತರ ಪದವಿ ಪಡೆದವರು ಶುಶ್ರೂಷ ಅಧೀಕ್ಷಕರು ದರ್ಜೆ-1ರ ಹುದ್ದೆಗೆ ಪದೋನ್ನತಿ ಬಯಸುವವರು ಕೋರಿಕೆ ಪತ್ರದೊಂದಿಗೆ ಎಲ್ಲಾ ಶೈಕ್ಷಣಿಕ ವಿದ್ಯಾರ್ಹತೆ ಪ್ರಮಾಣ ಪತ್ರ ಹಾಗೂ ಕೆಳಕಂಡ ಮಾಹಿತಿಯನ್ನು ಸಹ ಸಲ್ಲಿಸುವುದು. |
| 04 | ಹೈದರಬಾದ್-ಕರ್ನಾಟಕ ಪ್ರದೇಶಕ್ಕೆ ಸಂಬಂಧಪಟ್ಟ ನೌಕರರು ನಮೂನೆ "ಡಿ" ಅಥವಾ "ಎ" ಸಲ್ಲಿಸುವುದು. |
| 05 | 05 ವರ್ಷಗಳ ರಹಸ್ಯ ವರದಿ (2010-11 ರಿಂದ 2014-15)ಸಲ್ಲಿಸುವುದು. ಪ್ರತಿ ವರ್ಷಕ್ಕೆ ಪ್ರತ್ಯೇಕ ಕಾರ್ಯನಿರ್ವಹಣಾ ವರದಿಗಳನ್ನು ಸಲ್ಲಿಸುವುದು.<br>ವಿಶೇಷ ಸೂಚನೆ:- ವಿಶೇಷ ಕಾರ್ಯನಿರ್ವಾಹಣ ವರದಿಗಳನ್ನು ಸ್ವೀಕರಿಸುವುದಿಲ್ಲ. |
| 06 | ಸದರಿ ಜೇಷ್ಠತಾ ಸಂಖ್ಯೆಯನ್ನು ನಮೂದಿಸುವುದು. |
| 07 | ಎಸ್.ಎಸ್.ಎಲ್.ಸಿ. ಪ್ರಮಾಣ ಪತ್ರ ಹಾಗೂ ಕನ್ನಡ ಇಲಾಖಾ ಪರೀಕ್ಷೆ ತೇರ್ಗಡೆ ಹೊಂದಿರುವ ಬಗ್ಗೆ ವಿನಾಯಿತಿ ಪ್ರಮಾಣ ಪತ್ರ ಮತ್ತು ಶುಶ್ರೂಷ ಅಧೀಕ್ಷಕರು ದರ್ಜೆ-2ರ ಹುದ್ದೆಗೆ ಪದೋನ್ನತಿ ನೀಡಲಾದ ಆದೇಶದ ಪ್ರತಿಯನ್ನು ಮೇಲಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವುದು. |
| 08 | ರಾಜ್ಯ ಶುಶ್ರೂಷ ಪರಿಷತ್ತಿನ ನೋಂದಣಿ ಪ್ರಮಾಣ ಪತ್ರ ಹಾಗೂ ಡಿಪ್ಲೊಮೋ ನರ್ಸಿಂಗ್ ಪ್ರಮಾಣ ಪತ್ರ |
| 09 | ಸೇವೆಗೆ ಸೇರುವಾಗ ಯಾವ ಪ್ರವರ್ಗದಲ್ಲಿ ಆಯ್ಕೆಯಾಗಿದ್ದಾರೆ? ಆ ಬಗ್ಗೆ ಸೇವಾಪುಸ್ತಕದಲ್ಲಿ ನಮೂದಿಸಿರುವ ನಕಲು ಪ್ರತಿ ಹಾಗೂ ಜಾತಿ ಪ್ರಮಾಣ ಪತ್ರವನ್ನು ದೃಢೀಕರಣದೊಂದಿಗೆ ಸಲ್ಲಿಸುವುದು. |